# ಅಪ್ಪುಗೆ

**ಗೋಪಾಲಕೃಷ್ಣ ಪೈ**

ಬುರ್ಖಾ ಧರಿಸದೇ, ಆಧುನಿಕ ರೀತಿಯ ಉಡುಪುಗಳನ್ನು ಧರಿಸಿದ, ಸುಂದರ ರೂಪವುಳ್ಳ ಹೆಂಡತಿಯ ಜೊತೆಗೆ ವಯಸ್ಸಿಗೆ ಬಂದ ಮಗಳನ್ನೂ ಕರೆದುಕೊಂಡು ಹೋಟೇಲಿಗೆ ಹೋಗಿ ಕೂತ ಮು.

ಪಕ್ಕದ ಟೇಬಲ್ಲಿನ ಬಳಿ ಕುಳಿತ ತರುಣನೊಬ್ಬ ಬಿಟ್ಟ ಕಣ್ಣುಗಳಿಂದ ಒಂದೇ ಸವನೆ ತನ್ನ ಹೆಂಡತಿ ಮಗಳನ್ನು ನೋಡುತ್ತಾ ಇದ್ದುದನ್ನು ಕಂಡು ಸಿಟ್ಟಾಗಿ ಮು ಅವನನ್ನು ಏರುಧ್ವನಿಯಲ್ಲಿ ಕೇಳಿದ –

'ಏನು ಹಾಗೆ ನೋಡ್ತೀಯಾ?'

ಕಕ್ಕಾಬಿಕ್ಕಿಯಾಗಿ ಆ ತರುಣ ಒಂದು ಕ್ಷಣ ತಡೆದು ಹೇಳಿದ –

'ನಮ್ಮ ಹೆಣ್ಣು ಮಕ್ಕಳಿಗೂ ನಿಮ್ಮ ಹೆಣ್ಣು ಮಕ್ಕಳಿಗೂ ವ್ಯತ್ಯಾಸವಿರಬಹುದು ಎಂದುಕೊಂಡಿದ್ದೆ. ಯಾವ ವ್ಯತ್ಯಾಸವೂ ಇಲ್ಲವಲ್ಲ ಅಂತ ಆಶ್ಚರ್ಯವಾಯಿತು' ಎಂದ.

ಮು ಎದ್ದು ಬಂದು ತರುಣನನ್ನು ಗಟ್ಟಿಯಾಗಿ ಅಪ್ಪಿಕೊಂಡ.




ಕತೆಗಾರ, ಕಾದಂಬರಿಕಾರ ಹಾಗೂ ಅನುವಾದಕ ಪೈ ಕಾಸರಗೋಡಿನ ಪೆರ್ಲದವರು. 'ತಿರುವು', 'ಈ ಬೆರಳ ಗುರುತು', 'ಹಾರುವ ಹಕ್ಕಿಯ ಗೂಡಿನ ದಾರಿ' ಕಥಾಸಂಕಲನಗಳು. 'ಸ್ವಪ್ನ ಸಾರಸ್ವತ' ಕಾದಂಬರಿ. 'ಆಧುನಿಕ ಚೀನಿ ಸಣ್ಣಕತೆಗಳು', 'ಚೆಕೋವನ ಕೊನೆಯ ದಿನಗಳು', 'ಮೋಯಾನ್‌ನ ಕಥೆಗಳು', 'ಮಹಾತ್ಮನಿಗಾಗಿ ಕಾಯುತ್ತ' ಅನುವಾದಿತ ಪುಸ್ತಕಗಳು.